## ಸೂಪರ್ ಗ್ರ್ಯಾಂಡ್ ಫಿನಾಲೆ

ಝೀ ಕನ್ನಡ ನಡೆಸಿದ ಸರಿಗಮಪ ಲಿಟಲ್ ಚಾಂಪ್ಸ್ ಸೀಸನ್ 10 ಅತ್ಯುತ್ತಮ ಕಾರ್ಯಕ್ರಮ. ಹಾಡು ಹಕ್ಕಿಗಳ ಯಶಸ್ಸಿನ ಹಾದಿಯ ಗ್ರ್ಯಾಂಡ್ ಫಿನಾಲೆಯಲ್ಲಿ ಸುಮಧುರ ಗಾಯನ ಮೂಡಿ ಬಂತು. ಗ್ರ್ಯಾಂಡ್ ಫಿನಾಲೆಯ ಸಂಗೀತ ಯುದ್ಧ ಅತ್ಯುತ್ತಮವಾಗಿತ್ತು. ಮಕ್ಕಳು, ನಿರೂಪಕಿ ಮತ್ತು ತೀರ್ಪುಗಾರರ ಸಂಬಂಧ ಉತ್ತಮವಾಗಿತ್ತು. ಮಕ್ಕಳ ತಂದೆ– ತಾಯಿಗಳ ಮತ್ತು ಸಂಗೀತ ಮಾರ್ಗದರ್ಶಕರ ಅನುಬಂಧದಿಂದ ಸರಿಗಮಪ ಕಾರ್ಯಕ್ರಮವು ಮೊದಲಿನಿಂದ ಕೊನೆಯವರೆಗೂ ಸುಂದರವಾಗಿ ಮೂಡಿ ಬಂತು.

–ವೀಣಾ ಶಂಕರ್, ಬೆಂಗಳೂರು

## ಕಲಿಯಬೇಕು ಇವರಿಂದ..

ಸರಿಗಮಪ ಲಿಟಲ್ ಚಾಂಪ್ಸ್ ಉತ್ತಮವಾಗಿ ಮೂಡಿಬಂತು. ಇದರಲ್ಲಿ ಅನ್ಯಭಾಷಿಕ ಮಕ್ಕಳಂತೂ ನಮ್ಮ ಕನ್ನಡವನ್ನು ಆದರಿಸಿ, ಆರಾಧಿಸುವುದನ್ನು ನೋಡುವುದೇ ಬಲು ಸೊಗಸು. ದೂರದ ಬಂಗಾಳಿ, ಒಡಿಯಾ, ಭೋಜ್‌ಪುರಿ ಮಾತೃ ಭಾಷಿಕ ಮಕ್ಕಳಿಗೆ ಕನ್ನಡದ ಬಗೆಗಿರುವ ಕಾಳಜಿ, ಕಳಕಳಿ ನೋಡಿ ಹೃದಯ ತುಂಬಿ ಬಂದಿತು. ಅದರಲ್ಲೂ ಅವರ ಸ್ಪಷ್ಟ – ಸ್ವಚ್ಛ ಕನ್ನಡದ ಉಚ್ಛಾರಣೆ ನೋಡಿದರೆ ಇಲ್ಲೇ ಹುಟ್ಟಿ ಬೆಳೆದಿದ್ದಾರೇನೋ ಎಂಬ ಭಾವನೆ ಮೂಡುತ್ತದೆ.

ಕೊನೆಯಲ್ಲಿ ಅನುಶ್ರೀ ಕೇಳಿದ ಪ್ರಶ್ನೆಗೆ ದ್ವಿತೀಯ ಸ್ಥಾನ ಪಡೆದ ಅಂಕಿತ ಕುಂಡು ತಾಯಿ ನೀಡಿದ ಉತ್ತರ ಕೇಳಿ ಅವರ ಬಗ್ಗೆ ಹೃದಯ ತುಂಬಿ ಬಂತು. ತಮ್ಮ ಮಗಳು ಮೊದಲನೆಯ ಸ್ಥಾನಕ್ಕೆ ಪೈಪೋಟಿಯಲ್ಲಿ ಇದ್ದರೂ ಯಾವುದೇ ಬೇಸರ ತೋರಿಸಿಕೊಳ್ಳದೆ ಸುಪ್ರಿಯಾ ಜೋಶಿಯವರನ್ನು ಹೊಗಳಿ ಹೇಳಿದ ಮಾತುಗಳು ನಿಜಕ್ಕೂ ಹೆಮ್ಮೆ ಪಡುವಂತದ್ದು. ಅದೇ ರೀತಿ ದ್ವಿತೀಯ ಸ್ಥಾನ ಪಡೆದರೂ ನಗುನಗುತ್ತ ಸುಪ್ರಿಯ ಅವರನ್ನು ಅಂಕಿತ ಕುಂಡು ಅಭಿನಂದಿಸಿದ ರೀತಿ ತಾಯಿಯಂತೆ ಮಗಳು ಎಂಬುದನ್ನು ಸಾಬೀತು ಪಡಿಸಿದಂತಾಯಿತು.

– ಆನಂದಕುಮಾರ್, ಚಿತ್ರದುರ್ಗ,
ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಅಜ್ಞಾನದಿಂದ ಅನಾಹುತ

ಇತ್ತೀಚೆಗೆ ವೈಕುಂಠ ಏಕಾದಶಿಯಂದು ನಿಧನರಾದರೆ ಸ್ವರ್ಗಕ್ಕೆ ಹೋಗುತ್ತಾರೆಂಬ ನಂಬಿಕೆ ಹಾಗೂ ವಿಶ್ವಾಸದಿಂದ ಒಬ್ಬ ಅಮಾಯಕ ಮುಗ್ಧ ಹೆಣ್ಣು ಮಗಳು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಕೇಳಿ ಮನಸ್ಸು ತೀವ್ರವಾಗಿ ಘಾಸಿಗೊಂಡಿತು. ಅಂದು ಕೈಲಾಸದ ಎಲ್ಲ ದ್ವಾರಗಳು ಮುಕ್ತವಾಗಿರುತ್ತವೆ. ಅಂದು ಸಾವು ಸಂಭವಿಸಿದರೆ ಮೋಕ್ಷ ದೊರೆಯುತ್ತದೆ ಎಂದು (ಅ)ಜ್ಞಾನಿಗಳು ನೀಡಿದ  ನುಡಿಗಳೇ ಅಮಾಯಕ ಮುಗ್ಧ ಮಹಿಳೆಯ ಪ್ರಾಣಕ್ಕೆ ಎರವಾಯಿತು.

ಮತ್ತೊಂದು ರೀತಿಯಲ್ಲಿ ಈ ಹತ್ಯೆಯ ಹೊಣೆ ಹೋರಬೇಕಾದವರು ಟಿವಿ ವಾಹಿನಿಗಳು. ಕಾರಣವಾದವರು ಕೊಲೆಗಡುಕ ಜ್ಯೋತಿಷಿಗಳು.

—ಶಿವಕುಮಾರ ಕೊ. ಬಣಕಾರ, ಬಾಗಲಕೋಟೆ,
ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ

ವಾರದ ಪತ್ರ

## ದೈವ್ವದ ಕಲ್ಪನಾ ವಿಲಾಸ

ಮಿನುಗು ತಾರೆ ಕಲ್ಪನಾ ವಿಧಿವಶರಾಗಿ 36 ವರ್ಷಗಳ ನಂತರ ಕನ್ನಡದ ಕಿರು ತೆರೆಯ ಕೆಲವು ಚಾನೆಲ್‌ಗಳು ಈ ಡಿಸೆಂಬರ್ 26 ರಂದು 'ಕಲ್ಪನಾ ದೆವ್ವವಾಗಿ ಬೆಳಗಾವಿಯ ಗೋಟೂರಿನ ಪ್ರವಾಸಿ ಬಂಗಲೆಯಲ್ಲಿ ಪ್ರತಿ ಅಮಾವಾಸ್ಯೆ ದಿನ ತಿರುಗುತ್ತಿದ್ದಾರೆ' ಎಂದು ಬ್ರೇಕಿಂಗ್ ನ್ಯೂಸ್ ಪ್ರಸಾರ ಮಾಡಿದ್ದು ಎಂತಹ ಕಲ್ಪನಾ ವಿಪರ್ಯಾಸ! ಗೋಟೂರಿನ ಗ್ರಾಮಸ್ಥರೇ ತಾವು ಇದುವರೆಗೂ ಕಲ್ಪನಾ ದೆವ್ವ ನೋಡಿಲ್ಲ ಎಂದಿರುವಾಗ ಕಲ್ಪನಾ ದೆವ್ವದ ಕಥೆ, ಕನ್ನಡದ ಕೆಲವು ಚಾನೆಲ್‌ಗಳಲ್ಲಿ ಪ್ರಸಾರವಾಗಿದ್ದು ಏಕೆ? ಕೆಲವು ಚಾನೆಲ್‌ಗಳು ತಮ್ಮ ಮನಸ್ಸಿಗೆ ಬಂದಂತೆ ಬ್ರೇಕಿಂಗ್ ನ್ಯೂಸ್ ಪ್ರಸಾರ ಮಾಡಿದವು. ಪ್ರಸಾರವಾಗಿದ್ದೆಲ್ಲ ಸತ್ಯ ಎಂದು ನಂಬುವ ಲಕ್ಷಾಂತರ ಮುಗ್ಧ ವೀಕ್ಷಕರು ಇರುವಾಗ ನ್ಯೂಸ್ ಚಾನೆಲ್‌ಗಳು ತಮ್ಮ ಮನಸ್ಸಿಗೆ ಬಂದಂತೆ ಬ್ರೇಕಿಂಗ್ ನ್ಯೂಸ್ ಪ್ರಸಾರ ಮಾಡುವುದು ಎಂತಹ ವಿಪರ್ಯಾಸ!

–ಕಾಡನೂರು ರಾಮಶೇಷ, ಹುಲಿಮಂಗಲ

## ಕೃಷಿಗೆ ಮಹತ್ವ ಸಿಗಲಿ

ಕೃಷಿ ಸಂಬಂಧಿತ ಮಾಹಿತಿ ಕಾರ್ಯಕ್ರಮಗಳನ್ನು ಚಂದನ ಬಿಟ್ಟರೆ ಬೇರೆ ಇನ್ಯಾವುದೇ ಚಾನಲ್‌ನವರು ತೋರಿಸುತ್ತಿಲ್ಲ. ಕನಿಷ್ಠ ಮನೆಯ ಸುತ್ತ ಕೈತೋಟ, ಛಾವಣಿ ತೋಟದ ಬಗ್ಗೆಗಾದರೂ ವಾರದಲ್ಲಿ 1–2 ದಿನವಾದರೂ ತೋರಿಸಬೇಕು. ವೈಜ್ಞಾನಿಕ ವಿಧಾನದಿಂದ ಹೇಗೆಲ್ಲ ಉತ್ಪಾದಕತೆ ಹೆಚ್ಚಿಸಬಹುದೆಂದು ತೋರಿಸಿದರೆ ಬಹಳಷ್ಟು ರೈತರು, ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ. ಸದಾ ಜಾಹೀರಾತು, ಹಣವೇ ಮುಖ್ಯವಾಗದೇ ಕಾರ್ಯಕ್ರಮಗಳ ಕಡೆಗೂ ಗಮನಿಸುವಂತಾಗಲಿ. ಮನೆಹಾಳು ಧಾರಾವಾಹಿಗಳಿಂದ ಕನಿಷ್ಠ ಅರ್ಧಗಂಟೆಯಾದರೂ ಬಿಡುವು ಕೊಡಿಸಿದರೆ ವೀಕ್ಷಕರಿಗೂ ಖುಷಿಯಾಗುತ್ತದೆ. ಕೃಷಿ ಎಂದರೆ ಖುಷಿ ಎಂಬ ಭಾವನೆ ಮೂಡಿಸಬೇಕಾಗಿದೆ.

—ಎನ್. ಎಸ್. ಅಶ್ವಿನಿ ಸಂತೋಷ್, ಚಿತ್ರದುರ್ಗ

## ಸಾಕ್ಷಿ ಮರುಪ್ರಸಾರವಾಗಲಿ

ಉದಯದಲ್ಲಿ ಪ್ರಸಾರವಾದ ಪಿ.ಶೇಷಾದ್ರಿಯವರ 'ಸಾಕ್ಷಿ' ಧಾರಾವಾಹಿಯು ವಿಭಿನ್ನ ನೆಲಗಟ್ಟಿನಲ್ಲಿ ಪ್ರಸ್ತುತ ರಾಜಕಾರಣಿ– ಅಧಿಕಾರಿಗಳ ನಡುವೆ ನಡೆಯುತ್ತಿರುವ ಘರ್ಷಣೆಯನ್ನು ಬಹಳ ಅಚ್ಚುಕಟ್ಟಾಗಿ ತೋರಿಸುತ್ತಿದೆ. ಪಾತ್ರಕ್ಕೆ ಹೊಂದುವ ಕಲಾವಿದರ ಆಯ್ಕೆ ಕೂಡ ಸೂಕ್ತವಾಗಿದ್ದು, ಯುವಪೀಳಿಗೆ ಸಮಾಜಕ್ಕೆ ಯಾವ ರೀತಿ ಕಂಟಕವಾಗುತ್ತಿದೆ ಎಂಬುದನ್ನು ಮನಮುಟ್ಟುವಂತೆ ನಿರ್ದೇಶಿಸುತ್ತಿದ್ದಾರೆ. ಆದ್ದರಿಂದ ಈ ಧಾರಾವಾಹಿಯನ್ನು ಅಂದು ಅಥವಾ ಮಾರನೇ ದಿನ ಮರುಪ್ರಸಾರ ಮಾಡಲಿ ಎಂದು ಮನವಿ.

—ಸಿಹಿಮೊಗೆ ರಮೇಶ್, ಮೈಸೂರು

## ಅಶ್ಲೀಲ ಬಿಗ್ ಬಾಸ್!

ಕಲರ್ಸ್ ಕನ್ನಡದ ಬಿಗ್ ಬಾಸ್ ಅಶ್ಲೀಲತೆಯ ಪರಮಾವಧಿ ತಲುಪಿದೆ. ಪೂಜಾಗಾಂಧಿ, ಸುನಾಮಿ ಕಿಟ್ಟಿ, ಶೃತಿ, ಕೃತಿಕಾ ಮತ್ತು ಮಾ. ಆನಂದ್‌ರವರ ದೇಹಕ್ಕೆಲ್ಲ ವಿವಿಧ ತೈಲ ಮತ್ತು ಹೊಲಸು ಪದಾರ್ಥಗಳನ್ನೆಲ್ಲಾ ಅಭಿಷೇಕ ಮಾಡಲಾಯ್ತು. ಆಗ ಪೂಜಾ ಗಾಂಧಿ ತನಗೆ ಮೂತ್ರವಿಸರ್ಜನೆ ಮಾಡಬೇಕು ಎಂಬುದನ್ನು ಅಕ್ಕಪಕ್ಕದವರ ಬಳಿ ಹೇಳಿದರು. 'ಸೂಸು ಮಾಡಬೇಕು.. ಸೂಸು ಮಾಡ್ತೀನಿ..' ಎನ್ನುತ್ತಿದ್ದಂತೆ ಉಳಿದವರು ಆಕೆಯ ಕಾಲನ್ನೇ ನೋಡುತ್ತಿದ್ದರು. ಕ್ಯಾಮೆರಾ ಕಣ್ಣು ಕೂಡ ಆಕೆಯ ಕಾಲಿನೆಡೆಗೆ ಫೋಕಸ್ ಆಗುತ್ತಿತ್ತು. ಇವರಿಗೆ ನಾಚಿಕೆ, ಮಾನ ಮರ್ಯಾದೆ ಇಲ್ಲವೇ? ಆಕೆ ಯಾರಿಗೂ ಹೇಳದೆಯೇ ಸೂಸು ಮಾಡಿಕೊಂಡಿದ್ದರೂ ಗೊತ್ತಾಗುತ್ತಿರಲಿಲ್ಲ. ಅದನ್ನು ಡಂಗೂರ ಸಾರಿ ಹೇಳಬೇಕಾಗಿತ್ತೇ?

—ಪಿ.ಜೆ. ರಾಘವೇಂದ್ರ, ಮೈಸೂರು, ಕೆ.ಕಶ್ಯಪ್, ಮೈಸೂರು, ರುಕ್ಮಿಣಿ ಕೃ.ದೇಶಪಾಂಡೆ, ಗೋಕಾಕ

## ಊಸರವಳ್ಳಿಗಳು

ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ದೇವತೆ ಧಾರಾವಾಹಿ ಅತಿ ಕಳಪೆ ಧಾರಾವಾಹಿ ಎಂದರೆ ತಪ್ಪಾಗಲಾರದು. ಮೊಮ್ಮಗ ಬೇಕೆಂದು ಆರಂಭದಿಂದ ನಾನಾ ರೀತಿಯ ಆಟಗಳನ್ನು ಆಡುವ ಮಾವ ಶ್ರೀನಾಥ್ ವಶಿಷ್ಠರ ಪಾತ್ರ ವಾಕರಿಕೆ ತರಿಸುವಂತಿತ್ತು. ನಿತಿನ್‌ಗೆ ಶ್ರಾವ್ಯ ಸಿಗಬಾರದೆಂದು ಅವನ ತಾಯಿ ನೆಡೆಸುವ ಕುತಂತ್ರಗಳು ಸಹ ಅಸಹ್ಯ ಹಾಗೂ ಅರ್ಥಹೀನ. ಇನ್ನು ಬಾಡಿಗೆ ತಾಯಿ ಸಿಕ್ಕಳು ಎಂದು ಶ್ರಾವ್ಯಳ ತಂಗಿಯ ಪಾತ್ರಾಧಾರಿಯ ಮಗುವಿನಂತಹ ಮಾತುಗಳು ತೀರ ಬಾಲಿಶವಾಗಿತ್ತು. ಗಳಿಗೆಗೊಮ್ಮೆ ನಡೆ–ನುಡಿ ಬದಲಾಯಿಸುವ ಶ್ರಾವ್ಯಳ ತಂದೆ– ತಾಯಿಯ ಪಾತ್ರಗಳು, ಎಲ್ಲಕ್ಕಿಂತ ಹಿರಿಯರಿಗೆ ತಿಳಿಸದೆ ಬಾಡಿಗೆ ತಾಯಿಯಾಗಲು ಹೊರಟ ಶ್ರಾವ್ಯಳ ದೊಡ್ಡತನ ಸಹಾನುಭೂತಿಗಿಂತಲೂ ಅತಿ ದುರಹಾಂಕಾರದ ರೀತಿ ಹೇಸಿಗೆ ಬರುವಂತಿತ್ತು. ಆದಷ್ಟು ಬೇಗ ಈ ಧಾರಾವಾಹಿ ಮುಕ್ತಾಯವಾಗಲಿ.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು





# ನೆಗೆಟಿವ್ ಪಾತ್ರದ್ದು ಮಸ್ತ್ ಮಜಾ

**ಸೋನಾಲಿ ಲದ್ವಾ**
ಸುವರ್ಣದ 'ಅಮೃತ ವರ್ಷಿಣಿ'ಯ ಕೋಮಲಾ



★ *ಅಭಿನಯ ವೃತ್ತಿ ಹೇಗೆನಿಸುತ್ತಿದೆ?*

ಇದು ನನ್ನ ಮೊದಲ ಧಾರಾವಾಹಿ. ಐದಾರು ವರ್ಷದಿಂದ ಇದು ಪ್ರಸಾರವಾಗುತ್ತಿರುವುದರಿಂದ ತಂಡದಲ್ಲಿ ಮನೆಯ ವಾತಾವರಣ ನಿರ್ಮಾಣವಾಗಿದೆ. ನಟನೆಯ ಗೀಳಿನಿಂದ ಬಂದ ನಾನು ಆರಂಭದಲ್ಲಿ ಅಭಿನಯದ ಪಟ್ಟುಗಳನ್ನು ತಿಳಿದಿರಲಿಲ್ಲ. ಅದು ಮನಸ್ಸಿನ ಮೂಲೆಯಲ್ಲಿ ಕಾಡುತ್ತಿತ್ತು. ಸಹನಟರ ಪ್ರೋತ್ಸಾಹದಿಂದ ನಟನೆಯನ್ನು ಕಲಿತಿದ್ದೇನೆ.

ಮತ್ತೊಂದು ಸಂಗತಿ ಏನೆಂದರೆ, ಇದಕ್ಕೂ ಮುನ್ನ ನಾನು ಮಾಡೆಲಿಂಗ್ ಮಾಡುತ್ತಿದ್ದೆ. ಅದರಲ್ಲಿಯೂ ತುಂಬಾ ಕೆಲಸ ಮಾಡಿದ್ದರಿಂದ ಕ್ಯಾಮೆರಾ ಎದುರಿಸುವುದು ಕಷ್ಟವೇನೂ ಆಗಲಿಲ್ಲ. ಅಭಿನಯವನ್ನು ನಾನು ಹವ್ಯಾಸದಂತೆ ನೋಡುತ್ತಿದ್ದೆ. ವೈಮಾನಿಕ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ತಿಂಗಳ ಹಿಂದಷ್ಟೇ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಪೂರ್ಣಪ್ರಮಾಣದಲ್ಲಿ ನಟನೆಯಲ್ಲಿ ತೊಡಗುವ ಬಯಕೆಯಿದೆ.

★ *ಹೊಸ ವರ್ಷದ ಸಂಭ್ರಮ ಹೇಗಿತ್ತು?*

ಹೊಸವರ್ಷದ ಮುನ್ನಾ ದಿನ ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಇರುವುದಿಲ್ಲ. ಈ ವರ್ಷ ನಾನು ಮುಂಬೈಯಲ್ಲಿದ್ದೆ. ಕಳೆದ ವರ್ಷ ಕೂಡ ಅಲ್ಲೇ ಆಚರಿಸಿದೆ. ಕಾರಣ ಅಲ್ಲಿ ನನಗೆ ಹೆಚ್ಚಿನ ಸ್ನೇಹಿತರಿದ್ದಾರೆ. ಅದಕ್ಕಿಂತ ಮುಂಚೆ ಗೋವಾದಲ್ಲಿ ಮಾಡಿದ್ದೆ. ನಮ್ಮ ಸ್ನೇಹಿತರ ಗುಂಪಿನ ನಡುವೆ ಸಂಭ್ರಮಿಸುವುದು ಹೊಸ ಹುಮ್ಮಸ್ಸನ್ನು ಕೊಡುತ್ತದೆ.

★ *ನಿಮ್ಮ ಬೇರೆ ಹವ್ಯಾಸ.. ಓದು...*

ಸುತ್ತಾಟ ನನ್ನ ಅಚ್ಚುಮೆಚ್ಚಿನ ಹವ್ಯಾಸ. ಅದರಲ್ಲೂ ಸಾಹಸ ಮೆರೆಯಬೇಕು, ಅದರಲ್ಲಿನ ಥ್ರಿಲ್ಲಿಂಗ್ ಸಂತೋಷ ಅನುಭವಿಸುವ ತವಕ ಎಂದೆಂದಿಗೂ ಕಾಡುತ್ತದೆ. ಸಿಕ್ಕಾಪಟ್ಟೆ ಪ್ರವಾಸ ಮಾಡುತ್ತೇನೆ. ದೂರದೂರು, ಬೆಟ್ಟಗುಡ್ಡ ಸುತ್ತಿ ಫೈರ್ ಕ್ಯಾಂಪ್ ಮಾಡುವುದೂ ಖುಷಿ ಕೊಡುತ್ತದೆ. ಕಾದಂಬರಿ, ಕಥೆಯನ್ನು ಓದುತ್ತೇನೆ. ಚೇತನ್ ಭಗತ್ ನನ್ನ ನೆಚ್ಚಿನ ಲೇಖಕ. ಅವರ ಎಲ್ಲಾ ಕೃತಿಗಳನ್ನು ಓದಿದ್ದೇನೆ.

★ *ಕುಟುಂಬದ ಬೆಂಬಲ ಹೇಗಿದೆ?*

ಮೂಲತಃ ನಾವು ವಿಜಯಪುರದವರು. ಸ್ವಲ್ಪ ದಿನ ಸೊಲ್ಲಾಪುರದಲ್ಲಿ ಬೆಳೆದೆ. ಆಮೇಲೆ ಬೆಂಗಳೂರಿನಲ್ಲಿ ನೆಲೆಸಿದ್ದೇವೆ. ಅಮ್ಮ ಜಯಶ್ರೀ ಅವರು ಸೌಂದರ್ಯ ತಜ್ಞೆ, ಅಪ್ಪ ಪರಶುರಾಮ್ ಉದ್ಯಮ ನಡೆಸುತ್ತಿದ್ದರು. ಈಗ ನಿವೃತ್ತರಾಗಿದ್ದಾರೆ. ಅಪ್ಪ– ಅಮ್ಮನಿಗೆ ನಾನು ಗಗನಸಖಿಯಾಗಬೇಕಿತ್ತು, ಅದಾಗಿದ್ದೆ. ಅಭಿನಯಕ್ಕೆ ಅವರ ತಕರಾರು ಇರಲಿಲ್ಲ. ಆದರೆ ಅಜ್ಜ.. ಮತ್ತೆ ಕೆಲ ಹಿರಿಯರು ಹಿಂದೇಟು ಹಾಕಿದ್ದರು. ಆದರೆ ಈಗ ಅವರೆಲ್ಲರೂ ಸೇರಿ ಬೆನ್ನಿಗೆ ನಿಂತು ಬೆಂಬಲಿಸುತ್ತಿದ್ದಾರೆ.

★ *ಮತ್ತಿನ್ನೇನು ಪಾತ್ರ ಮಾಡಬೇಕು ಅಂದುಕೊಂಡಿದ್ದೀರಿ?*

ಈಗ ಪೂರ್ಣಾವಧಿ ನಟಿ. ಹಿಂದಿಯಲ್ಲಿ ಒಂದು ಧಾರಾವಾಹಿಯಲ್ಲಿ ನಟಿಸುವ ಬಗ್ಗೆ ಮಾತುಕತೆ ನಡೆಯುತ್ತಿದೆ. ಮೃದು ಧೋರಣೆಯ ಪಾತ್ರಕ್ಕಿಂತ ನೆಗೆಟಿವ್ ಛಾಯೆಯ ಪಾತ್ರ ಚೆನ್ನಾಗಿರುತ್ತದೆ. ಅಳುಮುಂಜಿ, ಗೋಳಾಟದ ನಿರ್ವಹಣೆಯೂ ಏಕತಾನತೆಯನ್ನು ಉಂಟುಮಾಡುತ್ತದೆ. ನೆಗೆಟಿವ್ ಗುಣದ ಪಾತ್ರಗಳಲ್ಲಿ ಹೆಚ್ಚಿನ ಅವಕಾಶ ಇರುತ್ತದೆ. ಅದರಲ್ಲಿ ಮಸ್ತ್ ಮಜಾ ಇರುತ್ತದೆ ಅದನ್ನು ಅನುಭವಿಸಬೇಕು. ಅದರಲ್ಲಿ ತಮಾಷೆ, ಮತ್ಸರ ಕಾರಿಕೊಳ್ಳುವ ಆಕ್ರೋಶ, ಜೊತೆಗೆ ರಮ್ಯತೆ, ತನ್ನ ಕುಕೃತ್ಯವನ್ನು ಆನಂದಿಸುವ ಭಾವ.. ಹೀಗೆ ಅಭಿನಯದ ಹಲವು ಆಯಾಮಗಳನ್ನು ಹೊರ ಹೊಮ್ಮಿಸಲು ಅಂತಹ ಪಾತ್ರ ಹೆಚ್ಚಿನ ಸವಾಲುಗಳನ್ನು ಒಡ್ಡುತ್ತದೆ ಎಂದುಕೊಂಡಿದ್ದೇನೆ. ಈ ಕಾರಣಕ್ಕೆ ಆ ರೀತಿಯ ಪಾತ್ರಗಳು ನನಗೆ ಇಷ್ಟವಾಗುತ್ತವೆ

★ *ಮದುವೆ ಬಗ್ಗೆ ಹೇಳಲಿಲ್ಲ...*

ಅದಕ್ಕೆ ಇನ್ನೂ ಸಾಕಷ್ಟು ಸಮಯ ಇದೆ. ಅದಕ್ಕೆ ಆ ಬಗ್ಗೆ ಇನ್ನೂ ಯೋಚಿಸಿಲ್ಲ.

■ ರಾಗು